ರಸಭೋಜನದ ಮೇಜವಾನಿಯಾಗಿತ್ತು. ಆಗಲೂ ಗೌಡರು ಸಾಹಿತ್ಯ, ಸಮಾಜವಾದ, ತಮ್ಮ ಶಿಷ್ಯಮಂಡಳಿ, ಶಿವಮೊಗ್ಗ ಭಾಗದ ತಮ್ಮ ಚಟುವಟಿಕೆ ಇತ್ಯಾದಿ ಅಸ್ಖಲಿತವಾಗಿ ಮಾತಾಡುತ್ತಲೇ ಇದ್ದರು. ಈಗ ವಿಷ್ಣುಮೂರ್ತಿಯ ಜತೆ ಸಂಬಂಧ ಹೊಂದಲು ಬಂದ ತಮ್ಮ ಆಪ್ತ ಗುರಪ್ಪ ಗೌಡರ ಬಗ್ಗೆಯೂ ಹೇಳಿದರು. ಅವರು ಆ ದಿನವೇ ಬೆಳಗಿನ ಹೊತ್ತು ಶಿವಮೊಗ್ಗೆಯಿಂದ ಹೊರಟು ಹುಬ್ಬಳ್ಳಿಗೆ ಬಂದು ತಮ್ಮ ಪ್ರತಿಷ್ಠೆಗೆ ತಕ್ಕಂತೆ, ವುಡ್‌ಲ್ಯಾಂಡ್ಸ್‌ನಲ್ಲಿ ಉಳಿದಿದ್ದರು. ಮೊದಲು ಕೂಡಿಗೆಯಲ್ಲಿ ಇರುತ್ತಿದ್ದ ಗುರಪ್ಪ ಗೌಡರು ಈಗ ಹಿರೇತೋಟದಲ್ಲಿ ನೆಲೆಸಿದ್ದಾರೆ. ತೀರ್ಥಹಳ್ಳಿಗೆ ಬಹಳ ಹತ್ತಿರ. ಅವರದು ದೊಡ್ಡ ಕುಟುಂಬ. ದೇವಂಗಿಯ ರತ್ನಮ್ಮ ಅವರ ಪತ್ನಿ. ಹಿರೇತೋಟದಿಂದ ದೇವಂಗಿ 10–12 ಮೈಲು ದೂರ. ರತ್ನಮ್ಮನ ತಮ್ಮ ದೇವಂಗಿ ಟಿ. ಚಂದ್ರಶೇಖರ್, ಕೆಎಸ್‌ನ ಹಾಗೂ ಕುವೆಂಪು ಹಾಡುಗಳನ್ನು ಅನೇಕ ಕಡೆ ಹಾಡಿ, ಪ್ರಚುರಪಡಿಸಿ, ಖ್ಯಾತಿ ಪಡೆದವರು. ಕುವೆಂಪು ಪತ್ನಿ ಹೇಮಾವತಿ, ರತ್ನಮ್ಮ ಹತ್ತಿರದ ಸಂಬಂಧಿಗಳು. ಗುರಪ್ಪ ಗೌಡರ ಹಿರಿಯ ಮಗಳು ವಿಜಯಾಳಿಗೆ ಮದುವೆಯಾಗಿದೆ. ಎರಡನೆಯ ಮಗಳು ಶಶಿರೇಖಾ ಮತ್ತು ಅವಳ ತಂಗಿ ಪ್ರತಿಮಾ ಬೆಂಗಳೂರಲ್ಲಿ ಶಿಕ್ಷಣ ಪಡೆದಿದ್ದಾರೆ. ಶಶಿರೇಖಾ ಬಿ.ಎಸ್‌ಸಿ. (ಹೋಂ ಸೈನ್ಸ್) ಮಾಡಿಕೊಂಡಿದ್ದಾಳೆ. ಈಗ ಶಶಿರೇಖಾಳಿಗೆ ವರ ಹುಡುಕುತ್ತಿದ್ದಾರೆ.

ಮಾತನಾಡುತ್ತಲೇ ಗೋಪಾಲಗೌಡರು ಇಷ್ಟೆಲ್ಲ ವಿವರಗಳನ್ನು ನೀಡಿದರು. ಮೂರ್ತಿ ನಗುನಗುತ್ತಲೇ ವಿವರ ಕೇಳಿಸಿಕೊಳ್ಳುತ್ತಿದ್ದರು. ಗೌಡರು ಆಗರ್ಭ ಶ್ರೀಮಂತ ಕುಟುಂಬದ, ಹಿರೇತೋಟದ ಮನೆತನದವರನ್ನು, ಅವರಂಥ ಆರ್ಥಿಕ ಹಿನ್ನೆಲೆ ಇರದ ಮೂರ್ತಿಗೆ ತೋರಿಸುತ್ತಿದ್ದಾರೆ, ಅನ್ನಿಸಿತು. ಒಂದು ಸಮಾಧಾನವೆಂದರೆ, ಮೂರ್ತಿಗೂ ಆ ಕುಟುಂಬ, ಅವರ ಹೆಗ್ಗಳಿಕೆ, ಸಂಪರ್ಕಗಳು, ಸಾಹಿತ್ಯ ಮತ್ತು ಸಂಗೀತದ ಒಲವಿನಿಂದಾಗಿ ದೇವಂಗಿ ಚಂದ್ರಶೇಖರ್ ಅವರು, ಹಾಗೂ ಓದಿನ ಬಲ ಮತ್ತು ಪ್ರಾದೇಶಿಕ ಸಾಮೀಪ್ಯದಿಂದ ಕುವೆಂಪು ಮುಂತಾದವರು ಗೊತ್ತಿದ್ದವರೇ ಆಗಿದ್ದರು. ನಾನು ಈ ಬಗ್ಗೆ ನನ್ನ ಸಂಕೋಚವನ್ನು ವ್ಯಕ್ತಪಡಿಸಿದೆ. ಗೌಡರು ಮೂಲತಃ ಮಾನವೀಯ ಸಂಬಂಧಗಳನ್ನು ನಂಬಿದವರು. ಅವರು ಸ್ಪಷ್ಟವಾಗಿ ಹೇಳಿದರು: 'ಈ ಎರಡೂ ಕಡೆಯವರು ಗೌಡರು ಎಂಬ ಜಾತಿ ಕಾರಣಕ್ಕೆ ನಾನು ಈ ಸಂಬಂಧದ ಬಗ್ಗೆ ಯೋಚಿಸಿಲ್ಲ, ಆದರೆ ವಿಷ್ಣುಮೂರ್ತಿಯನ್ನು ಅವರ ಶಾಲಾ ದಿನಗಳಿಂದಲೇ ಬಲ್ಲೆ; ಬಹಳ ಸಲ ಅವರ ಯಡೂರು ಮನೆಯಲ್ಲಿ ಉಂಡಿದ್ದೇನೆ, ಉಳಿದಿದ್ದೇನೆ. ಆತ ಸಾಹಸಿ, ಬಡವರು, ಸಹ್ಯಾದ್ರಿಯ ನೆಲವನ್ನು ಮನಸಾರೆ ಪ್ರೀತಿಸುವ ಸ್ವಭಾವದವರು. ಇಂಥವರ ಜೊತೆಗೆ ಹೊಂದಿಕೊಳ್ಳುವಂಥ ಮನೋಶ್ರೀಮಂತಿಕೆ ಹಿರೇತೋಟದ ಮಂದಿಯಲ್ಲಿದೆ. ಅವರು ಶ್ರೀಮಂತರು ನಿಜ, ಆದರೆ ಒಣ ಅಹಂಕಾರಿಗಳಲ್ಲ, ಸದ್ಗುಣಿಗಳು. ನಾಳೆ ನಾವೆಲ್ಲರೂ ಕೂಡೋಣ, ಹುಡುಗ ಹುಡುಗಿ ಪರಸ್ಪರರನ್ನು ಭೆಟ್ಟಿಯಾಗಲಿ, ಅವರು ಒಪ್ಪಿದರೆ ಮಾತ್ರ ಮುಂದಿನ ಮಾತು. ಇಲ್ಲದಿದ್ದರೆ ನಾವೆಲ್ಲರೂ ಸ್ನೇಹಿತರಾಗಿ ಇರೋಣ', ಎಂದರು. 'ಇದು ಹಿರೇತೋಟದವರು ನೋಡುತ್ತಿರುವ ಮೊದಲ ಸಂಬಂಧ, ನಮ್ಮ ವಿಷ್ಣುಮೂರ್ತಿಗೂ ಇದು ಮೊದಲ ಪ್ರಸಂಗ, ಅದೂ ಅಯಾಚಿತವಾಗಿ ಕೂಡಿ ಬಂದಿದೆ. ಎಲ್ಲ ವಿವರಗಳನ್ನು ತಿಳಿದ ನಂತರವೂ ಗುರಪ್ಪ ಗೌಡರು ಮಗಳನ್ನು ತೋರಿಸಲು ಮನಸ್ಸು ಮಾಡಿದ್ದಾರೆ. ಅವರು ಸುಸಂಸ್ಕೃತ ಮನಸ್ಸಿನವರು, ಅವರಿಗೆ ನಾನೇ ಮೂರ್ತಿಯ ಬಗ್ಗೆ ಹೇಳಿದ್ದೇನೆ. ಮೂರ್ತಿ ಈಗಾಗಲೇ ಡಿಗ್ರಿ ಮುಗಿಸಿ ಅದೇ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದ್ದಾರೆ. ವೈಯಕ್ತಿಕವಾಗಿ ನನಗೆ ಇದು ಒಳ್ಳೆಯ ಸಂಬಂಧವಾಗುತ್ತದೆ ಅನ್ನಿಸಿದೆ; ನಾಳೆ ಬೆಳಗಿನ ತಿಂಡಿಗೆ ನಾವೆಲ್ಲರೂ ವುಡ್‌ಲ್ಯಾಂಡ್ಸ್‌ನಲ್ಲಿ ಕೂಡೋಣ, 8.30ಕ್ಕೆ ಕಾರ್ ಕೆಎಂಸಿಗೆ ಬರುತ್ತದೆ', ಅಂದರು.

ಮೊದಲ ಸಲ ನಮ್ಮ ಮನೆಗೆ ಬಂದಿದ್ದ ಗೋಪಾಲಗೌಡರು ಅಲ್ಲಿ ಟೇಬಲ್ ಮೇಲೆ ಇಟ್ಟಿದ್ದ, ಎರಡು ದಿನಗಳ ಹಿಂದೆಯಷ್ಟೆ ಕೊಂಡು ತಂದಿದ್ದ, 'ಮಲೆಗಳಲ್ಲಿ ಮದುಮಗಳು' ಕುವೆಂಪು ಕಾದಂಬರಿಯನ್ನು, 'ಓದಿ ಕೊಡುತ್ತೇನೆ', ಎನ್ನುತ್ತ ಹಿಡಿದುಕೊಂಡರು. ಅಂತೂ 'ಮದುಮಗಳು' ಕುರಿತು ಯೋಚಿಸುತ್ತಿದ್ದ ಗೋಪಾಲಗೌಡರ ಕೈಗೆ ನನ್ನ ಪುಸ್ತಕ ತಲುಪಿದ್ದು ಸಹ ನನ್ನ ಭಾಗ್ಯವೇ ಅನ್ನಿಸಿತು.

3

ಮರುದಿವಸ ಡಾ. ವಿಷ್ಣುಮೂರ್ತಿಯ ಜೊತೆಗೆ